


‘ಏರುತಿಹುದು ಹಾರುತಿಹುದು ನೋಡು ನಮ್ಮ ಬಾವುಟ...’ ಎಂಬ ಕನ್ನಡ ಪದ್ಯವನ್ನು ಯಾರು ತಾನೇ ಕೇಳಿಲ್ಲ? ಈ ಪದ್ಯವನ್ನು ಪ್ರಸ್ತುತ ವಿದ್ಯಮಾನಕ್ಕೆ ಸರಿಹೊಂದುವಂತೆ ‘ಏರುತಿಹುದು, ಮಿತಿ ಮೀರುತಿಹುದು ಬೇಸಿಗೆಯ ಆರ್ಭಟ’ ಎಂದು ಬದಲಾಯಿಸಿದರೆ ಹೇಗೆ?

ಸೂರ್ಯದೇವ ಕೆಂಗಣ್ಣು ಬಿಡುತ್ತಿದ್ದಾನೆ. ಬಿಸಿಲಿನ ಆರ್ಭಟ ಅಕ್ಷರಶಃ ಅಟ್ಟಹಾಸ ಮೆರೆಯುತ್ತಿದೆ, ಹಿಂದೆಂದೂ ಕಂಡು ಕೇಳರಿಯದ ಉಷ್ಣತೆ, ತಾಪಮಾನ ಈಗ ಕಂಡುಬರುತ್ತಿದೆ. ದಿನದಿಂದ ದಿನಕ್ಕೆ ಬಿಸಿಲ ಧಗೆ ತಾರಕಕ್ಕೇರಿದ್ದು, ವಾತಾವರಣದಲ್ಲಿ ಉಷ್ಣಾಂಶ ಏರಿಕೆ ಹಾಗೂ ಬಿಸಿ ಗಾಳಿಯಿಂದ ಜನ–ಜಾನುವಾರು ಹೈರಾಣಾಗುತ್ತಿರುವುದು ವಾಸ್ತವದ ಸಂಗತಿ. ಹವಾಮಾನ ವೈಪರೀತ್ಯ, ನಗರೀಕರಣ, ಬೃಹತ್ ಯೋಜನೆಗಳ ಕಾಮಗಾರಿ, ಕಾಂಕ್ರೀಟ್ ಕಟ್ಟಡಗಳ ನಿರ್ಮಾಣ, ಪರಿಸರ ನಾಶ, ರಸ್ತೆ ಸೇರಿ ವಿವಿಧ ಕಾಮಗಾರಿ ಹಾಗೂ ಹಸಿರು ಪರಿಸರಗಳ ಕುಗ್ಗುವಿಕೆಯಿಂದ ವಾತಾವರಣದಲ್ಲಿ ಉಷ್ಣತೆ ಹೆಚ್ಚಾಗುತ್ತಿದೆ ಎಂಬುದು ಹವಾಮಾನ ತಜ್ಞರ ಅಭಿಮತ. ಆದರೂ ಈ ಮಟ್ಟಕ್ಕೆ ಉಷ್ಣತೆ ಏರಿರುವುದು ವಿಪರ್ಯಾಸವೇ ಸರಿ.

‘ಕಾಂಕ್ರೀಟ್ ಕಟ್ಟಡಗಳು, ಸಿಮೆಂಟ್, ಡಾಂಬರ್ ರಸ್ತೆಗಳು ಸೂರ್ಯನ ಶಾಖವನ್ನು ಹೀರಿಕೊಂಡು, ರಾತ್ರಿ ವೇಳೆ ಆ ಶಾಖವನ್ನು ಹೊರಹೊಮ್ಮಿಸುತ್ತವೆ. ವಾಹನಗಳಿಂದ ಹೊರಹೊಮ್ಮುವ ಶಾಖ, ಕೈಗಾರಿಕೆಗಳು ಹೊರಸೂಸುವ ಬಿಸಿ ಗಾಳಿ ಮುಂತಾದ ಕಾರಣಗಳಿಂದಲೂ ತಾಪಮಾನ ಏರಿಕೆಯಾಗುತ್ತಿದೆ. ಅಭಿವೃದ್ಧಿಯ ಹೆಸರಿನಲ್ಲಿ ಪರಿಸರ ನಾಶ ಮಾಡುತ್ತಾ ಹೋದಲ್ಲಿ ಇದರ ಪರಿಣಾಮ ಇನ್ನಷ್ಟು ಭೀಕರವಾಗಿರುತ್ತದೆ’ ಎಂಬುದು ಹವಾಮಾನ ತಜ್ಞರ ಅಭಿಪ್ರಾಯ.

ಬೆಂಗಳೂರು ನಗರದಲ್ಲಿ ಕಳೆದ ಹಲವು ವರ್ಷಗಳಲ್ಲಿ ಏಪ್ರಿಲ್‌ನಲ್ಲಿ ಸರಾಸರಿ ಗರಿಷ್ಠ ಉಷ್ಣಾಂಶ 34.1 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. 2016ರಲ್ಲಿ ಗರಿಷ್ಠ 39.2 ಡಿಗ್ರಿ ಸೆಲ್ಸಿಯಸ್‌ಗೆ ತಲುಪಿತ್ತು. ಈ ವರ್ಷವು ವಾತಾವರಣದಲ್ಲಿ ತೇವಾಂಶ ಕೊರತೆಯಿಂದಾಗಿ ಉಷ್ಣಾಂಶ ಏರುಗತಿ ಪಡೆದಿದೆ. ಈ ವರ್ಷ ಬೆಂಗಳೂರು ನಗರ ಪ್ರದೇಶದಲ್ಲಿ 40 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶದವರೆಗೂ ತಲುಪಿದೆ.